ಕೃಷ್ಣ ಮೇಲ್ದಂಡೆ ಯೋಜನೆಯ ಬಗ್ಗೆ

೫೯೭. ಶ್ರೀ ಆರ್. ಎನ್. ನಾಯ್ಕ (ಹೊನ್ನಾವರ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಹಂತದ ದ್ವಿತೀಯ ಘಟ್ಟಕ್ಕೆ ತಗಲಬಹುದಾದ ವೆಚ್ಚವೆಷ್ಟು? ಆ ಬಗ್ಗೆ ಸಂಪನ್ಮೂಲ ಕ್ರೋಢೀಕರಿಸಲು ಸರ್ಕಾರದವರಿಂದ ತೆಗೆದುಕೊಂಡಿರುವ ಕ್ರಮವೇನು;

ಆ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಹಂತದ ದ್ವಿತೀಯ ಘಟ್ಟದ ಬಗ್ಗೆ ತಾಂತ್ರಿಕ ಸಮೀಕ್ಷೆಯನ್ನು ಎಂದು ಮುಗಿಸಲಾಯಿತು ಹಾಗೂ ಕೇಂದ್ರದ ಮಂಜೂರಿಗೆ ಯಾವಾಗ ಕಳಿಸಲಾಯಿತು ಮಂಜೂರಾತಿ ದೊರೆತಿದೆಯೇ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ವಿಶ್ವ ಬ್ಯಾಂಕ್ ನೆರವಿಗೆ ಮುಂದೊಡ್ಡಲಾದ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟ ಎರಡನೇ ಹಂತದ ಅಂದಾಜು ವೆಚ್ಚ ೫೫೦ ಕೋಟಿ ರೂ.ಗಳು ದೊರಕಬಹುದಾದ ವಿಶ್ವ ಬ್ಯಾಂಕ್ ನೆರವನ್ನು ಪರಿಗಣಿಸಿ ಹಾಗೂ ಯೋಜನೆಯು ೭ನೇ ಪಂಚವಾರ್ಷಿಕ ಯೋಜನೆಗಳಿಗೆ ಪಸರಿಸಿರುವುದರಿಂದ ಯೋಜನೆಯನ್ನು ಕಾರ್ಯಗತಗೊಳಿಸಲು ಬೇಕಾದ ಹಣವನ್ನು ಒದಗಿಸಲಾಗುವುದು.

ಆ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟ ಎರಡನೆಯ ಹಂತದ ಯೋಜನಾ ವರದಿಯ ಸಮೀಕ್ಷೆಯನ್ನು ರಾಜ್ಯ ಸರ್ಕಾರದ ಮಟ್ಟದಲ್ಲಿ ಮುಗಿಸಿದ ನಂತರ ಕೇಂದ್ರ ಸರ್ಕಾರಕ್ಕೆ ಮೊದಲು ಜನವರಿ ೧೯೮೬ರಲ್ಲಿ ಕಳಿಸಲಾಯಿತು ಆನಂತರ ಕೇಂದ್ರ ಸರ್ಕಾರ ಹಾಗೂ ವಿಶ್ವ ಬ್ಯಾಂಕ್ ನವರು ಸೂಚಿಸಿದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಯೋಜನಾ ವರದಿಯನ್ನು ಮಾರ್ಪಡಿಸಿ, ಮಾರ್ಪಾಟುಗೊಂಡ ೫೫೦ ಕೋಟಿ ರೂ.ಗಳ ಅಂದಾಜಿನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಆಗಸ್ಟ್ ೧೯೮೭ರಲ್ಲಿ ಕಳಿಸಲಾಯಿತು, ಈ ಯೋಜನೆಗೆ ಕೇಂದ್ರ ಜಲ ಆಯೋಗವು ದಿನಾಂಕ ೨೧-೧೦-೧೯೮೭ರಂದು ಮತ್ತು ಕೇಂದ್ರದ ಜಲಸಂಪನ್ಮೂಲ ಸಚಿವಾಲಯವು ದಿನಾಂಕ ೫-೨-೧೯೮೭ರಂದು ತಮ್ಮ ಒಪ್ಪಿಗೆಯನ್ನು ಕೊಟ್ಟಿವೆ.

ಕಾರವಾರ ಬಂದರಿನ ನಿರ್ಮಾಣ ಕಾರ್ಯದ ಬಗ್ಗೆ

೬೦೧. ಶ್ರೀ ಆರ್.ಎನ್. ನಾಯ್ಕ (ಹೊನ್ನಾವರ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರವಾರ ಬಂದರು ನಿರ್ಮಾಣಕ್ಕೆ ತಗಲಿದ ವೆಚ್ಚವೆಷ್ಟು?

ಆ) ಯಾವ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಯಿತು ಹಾಗೂ ನಿರ್ಮಾಣ ಕಾರ್ಯ ಮುಂಗಿದಿದೆಯೇ?

ಇ) ಬಂದರಿನ ತಳಪಾಯ ಕುಸಿದು ಕಾಮಗಾರಿ ನಿಂತಿದ್ದು ನಿಜವೇ? ಹಾಗಿದ್ದಲ್ಲಿ ದುರಸ್ತಿಗಾಗಿ ಒದಗಬಹುದಾದ ಖರ್ಚಿನ ಮೊತ್ತ ಎಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) —

ಅ) ದಿನಾಂಕ ೩೧-೭-೧೯೮೭ ರವರೆಗೆ ಒಟ್ಟು ೧೬.೬೨ ಕೋಟಿ ರೂ.ಗಳು.

ಆ) ಮೊದಲ ಹಂತದ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಯಿತು, ನಿರ್ಮಾಣ ಕಾರ್ಯ ಮುಂಗಿಯುವ ಹಂತದಲ್ಲಿದೆ.

ಇ) ಇಲ್ಲ.